## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2012-13 ನೇ ಸಾಲಿಗೆ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯಡಿಯಲ್ಲಿ ರಾಯಚೂರು ಜಿಲ್ಲಾ ಪಂಚಾಯತಿಗೆ ಮೊದಲನೇ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:

1. ಭಾರತ ಸರ್ಕಾರದ ಪಂಚಾಯತ್ ರಾಜ್ ಸಚಿವಾಲಯ, ನವದೆಹಲಿ ರವರ ಪತ್ರ ಸಂಖ್ಯೆ: ಎನ್-11019/1446/2012-BRGF; ದಿನಾಂಕ: 26-09-2012.
2. ಆರ್ಥಿಕ ಇಲಾಖೆಯ ಜಮಾ ದೃಢೀಕರಣ ಪತ್ರ ಸಂಖ್ಯೆ: ಆಇ/43/ಬಿಜಿಎಲ್/2013, ದಿನಾಂಕ: 29-09-2012.

ಪ್ರಸ್ತಾವನೆ:

ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ರಾಯಚೂರು ಜಿಲ್ಲಾ ಪಂಚಾಯತಿಗೆ ವಾರ್ಷಿಕ ಅನುದಾನ ₹ 21.49 ಕೋಟಿಗಳನ್ನು ನಿಗಧಿಪಡಿಸಿರುತ್ತದೆ.

ಪ್ರಸ್ತುತ ಸಾಲಿನವರೆಗೆ, ಸದರಿ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ಬಿಡುಗಡೆಗೊಳಿಸಿರುವ ಅನುದಾನವನ್ನು ರಾಜ್ಯ ಸರ್ಕಾರವು ರಾಯಚೂರು ಜಿಲ್ಲಾ ಪಂಚಾಯತಿಗೆ ಬಿಡುಗಡೆಗೊಳಿಸಿರುವ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ವರ್ಷ | ರಾಜ್ಯ ಸರ್ಕಾರವು ಬಿಡುಗಡೆಗೊಳಿಸಿರುವ ಆದೇಶ ಸಂಖ್ಯೆ ಮತ್ತು ದಿನಾಂಕ | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| 1. | 2006-07 | ಸಂಖ್ಯೆ: ಗ್ರಾಅಪ/03/ಜಿಪಸ/2007, ದಿ:31-08-2007. | 7.50 |
| 2. | 2007-08 | - | - |
| 3. | 2008-09 | - | - |
| 4. | 2009-10 | 1.ಸಂಖ್ಯೆ: ಗ್ರಾಅಪ/106/ಜಿಪಸ/2007 (5), ದಿ: 30-11-2009. | 17.60 |
| | | 2.ಸಂಖ್ಯೆ: ಗ್ರಾಅಪ/106/ಜಿಪಸ/2007 (ಭಾಗ) (5) ದಿ: 5-10-2010. | 1.96 |
| 5. | 2010-11 | 1.ಸಂಖ್ಯೆ: ಗ್ರಾಅಪ/106/ಜಿಪಸ/2007 (1), ದಿ: 05-10-2010. | 13.61 |
| | | 2.ಸಂಖ್ಯೆ:ಗ್ರಾಅಪ/106/ಜಿಪಸ/2007(2) ದಿ:29.03.2011 | 5.95 |
| 6. | 2011-12 | 1.ಸಂಖ್ಯೆ:ಗ್ರಾಅಪ/106/ಜಿಪಸ/2007(2) ದಿ:05.12.2011 | 13.58 |
| | | 2. .ಸಂಖ್ಯೆ:ಗ್ರಾಅಪ/106/ಜಿಪಸ/2007(2) ದಿ:27.03.2012 | 7.91 |

2012-13 ನೇ ಸಾಲಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ರಾಯಚೂರು ಜಿಲ್ಲಾ ಪಂಚಾಯತಿಗೆ ಮೊದಲನೇ ಕಂತಿನ ಅನುದಾನ ₹ 6.49 ಕೋಟಿಗಳನ್ನು ಮೇಲೆ ಓದಲಾದ (1) ರಲ್ಲಿನ ಪತ್ರದಲ್ಲಿ ಬಿಡುಗಡೆಗೊಳಿಸಿರುತ್ತದೆ. ಸದರಿ ಹಣವು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಜಮೆ ಆಗಿರುವ ಬಗ್ಗೆ ಆರ್ಥಿಕ ಇಲಾಖೆಯು ಮೇಲೆ ಓದಲಾದ (2) ರ ಪತ್ರದನ್ವಯ ದೃಢೀಕರಿಸಿರುತ್ತದೆ. ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ರಾಯಚೂರು ಜಿಲ್ಲಾ ಪಂಚಾಯತಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಬಿಡುಗಡೆಗೊಳಿಸಲು ಉದ್ದೇಶಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/204/ಜಿಪಸ/2012**
**ಬೆಂಗಳೂರು, ದಿನಾಂಕ: 11-10-2012.**

2012-13 ನೇ ಸಾಲಿನ ಹಿಂದುಳಿದ ಪ್ರದೇಶಗಳ ಅನುದಾನ ನಿಧಿ (BRGF) ಯೋಜನೆಯಡಿ ರಾಯಚೂರು ಜಿಲ್ಲೆಗೆ ಮೊದಲನೇ ಕಂತಿನ ಅನುದಾನವನ್ನು ಈ ಕೆಳಗಿನಂತೆ ಬಿಡುಗಡೆಗೊಳಿಸಿದೆ.

| ಕ್ರಮ ಸಂಖ್ಯೆ | ವರ್ಷ | ಜಿಲ್ಲಾ ಪಂಚಾಯತಿ | ಮೊತ್ತ (₹ ಕೋಟಿಗಳಲ್ಲಿ) |
|---|---|---|---|
| 1. | 2012-13 | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ರಾಯಚೂರು | 6.49 |
| | (₹ ಆರು ಕೋಟಿ ನಲವತ್ತೊಂಭತ್ತು ಲಕ್ಷ ಮಾತ್ರ) | | |

1) ಸದರಿ ಅನುದಾನದಲ್ಲಿ SCPSC Component ಗೆ ₹ 1.23 ಕೋಟಿಗಳು STSP Component ಗೆ ₹ 1.18 ಕೋಟಿಗಳು ಮತ್ತು Non-SCPSC/STSP Component ಗೆ ₹ 4.08 ಕೋಟಿಗಳಾಗಿರುತ್ತವೆ. SCPSC, STSP Component ಗೆ ಪ್ರತ್ಯೇಕ ಉಪಯುಕ್ತತಾ ಪ್ರಮಾಣ ಪತ್ರ, ಆರ್ಥಿಕ ಮತ್ತು ಭೌತಿಕ ಪ್ರಮಾಣ ಪತ್ರವನ್ನು ನೀಡತಕ್ಕದ್ದು.

2) ಈ ಅನುದಾನವನ್ನು ಮಾರ್ಗಸೂಚಿಯನ್ವಯ ವಿನಿಯೋಗಿಸಿ, ನಿಗದಿತ ನಮೂನೆಗಳಲ್ಲಿ ಉಪಯುಕ್ತತಾ, ಆರ್ಥಿಕ ಮತ್ತು ಭೌತಿಕ ಪ್ರಮಾಣ ಪತ್ರಗಳನ್ನು, ಆಡಿಟ್ ವರದಿ ಮತ್ತು ಇನ್ನಿತರೆ ಪ್ರಮಾಣ ಪತ್ರಗಳನ್ನು ಆಗಿಂದಾಗ್ಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಬಿ.ಆರ್.ಜಿ.ಎಫ್. ಮಾರ್ಗಸೂಚಿ ಕ್ರಮ ಸಂಖ್ಯೆ 4.6 ರಲ್ಲಿರುವಂತೆ ಸದರಿ ಅನುದಾನವನ್ನು ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿದ 15 ದಿನಗಳೊಳಗಾಗಿ ಯೋಜನೆ ಅನುಷ್ಠಾನಗೊಳಿಸುವ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಮುನಿಸಿಪಾಲಿಟಿ ಮತ್ತು ಇತರೆ ಸಂಘ ಸಂಸ್ಥೆಗಳಿಗೆ ಕ್ರಿಯಾ ಯೋಜನೆಯಲ್ಲಿ ಮೀಸಲಿಟ್ಟಿರುವ ಅನುದಾನವನ್ನು ಬಿಡುಗಡೆ ಮಾಡತಕ್ಕದ್ದು. ತಪ್ಪಿದಲ್ಲಿ, ಭಾರತೀಯ ರಿಜರ್ವ್ ಬ್ಯಾಂಕ್‌ನ ದರದ ಅನ್ವಯ ದಂಡ ರೂಪದ ಬಡ್ಡಿಯನ್ನು ಪಾವತಿಸಬೇಕಾಗುತ್ತದೆ.

4) ಈ ವೆಚ್ಚವನ್ನು ಸಮವಿಕಾಸ ಯೋಜನೆಯ 2012-13 ನೇ ಸಾಲಿನ ಲೆಕ್ಕಶೀರ್ಷಿಕೆ 2575-02-196-1-01 (ಯೋಜನೆ) ರಡಿಯಲ್ಲಿ Lumsum-ZP ರಲ್ಲಿ ಕಲ್ಪಿಸಲಾಗಿರುವ ₹ 124.40 ಕೋಟಿಗಳಿಂದ Link Document ನ ಜಿಲ್ಲಾ ವಲಯಕ್ಕೆ ಪ್ರಸ್ತುತ ಹೊಸ ಲೆಕ್ಕ ಶೀರ್ಷಿಕೆ 2575-00-101-0-26 (ಹಿಂದುಳಿದ ಪ್ರದೇಶಗಳ ಅನುದಾನ ನಿಧಿ) ರಡಿಯಲ್ಲಿ ಸೆಳೆಯಬೇಕಿದೆ ಹಾಗೂ ಬಿ.ಆರ್.ಜಿ.ಎಫ್. ಮಾರ್ಗಸೂಚಿ ಕ್ರಮ ಸಂಖ್ಯೆ: 4.8 ರ ಅನ್ವಯ ಸದರಿ ಅನುದಾನವನ್ನು ಡ್ರಾ ಮಾಡಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಜಮಾ ಮಾಡಿಕೊಳ್ಳತಕ್ಕದ್ದು.

5) ನಿಗಧಿತ ನಮೂನೆಯಲ್ಲಿ ಮಾಹೆಯಾನ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಪ್ರತಿ ತಿಂಗಳ 7ನೇ ತಾರೀಖಿನೊಳಗೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

6) ಬಿ.ಆರ್.ಜಿ.ಎಫ್. ಕ್ರಿಯಾ ಯೋಜನೆಯನ್ನು, Plan Plus, ಪ್ರಗತಿ ವರದಿಯನ್ನು Action soft ತಂತ್ರಾಂಶದಲ್ಲಿ ಹಾಗೂ ಜಿಲ್ಲಾ ಪಂಚಾಯತಿಯ ವೆಬ್‌ಸೈಟ್‌ನಲ್ಲಿ ಕಡ್ಡಾಯವಾಗಿ ಪ್ರದರ್ಶಿಸುವುದು. ಈಗಾಗಲೇ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸದಿದ್ದಲ್ಲಿ ಈ ಆದೇಶ ತಲುಪಿದ ಕೂಡಲೇ ಪ್ರದರ್ಶಿಸಲು ಕ್ರಮವಹಿಸುವುದು.

7) ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ2/ಟಿಎಫ್‌ಪಿ/2010 ದಿನಾಂಕ:30-04-2010 ರಲ್ಲಿ ಆಡಳಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ/ ಕಾರ್ಯದರ್ಶಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಹೊರಡಿಸಿದೆ
ದಿನಾಂಕ 11/10
ಗ್ರಾ.ಅ.ಪಂ. ಇಲಾಖೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರ್ಗರೇಟ್ ಲೀನಾ ನರೋನ್ಹ) 11/10/12
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

11-10-2012

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ,
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಮತ್ತು ಸಾಂಖ್ಯಿಕ ಇಲಾಖೆ
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
6. ಸರ್ಕಾರದ ವಿಶೇಷಾಧಿಕಾರಿಗಳು, (ಜಿಲ್ಲಾ ಪಂಚಾಯತಿ), ಆರ್ಥಿಕ ಇಲಾಖೆ
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ,
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ರಾಯಚೂರು.
9. ನಿರ್ದೇಶಕರು, ಎನ್.ಎಂ.ಸಿ., ಖನಿಜ ಭವನ, ಬೆಂಗಳೂರು
10. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
11. ಜಿಲ್ಲಾ ಖಜಾನಾಧಿಕಾರಿಗಳು, ರಾಯಚೂರು

ಪ್ರತಿ:

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು
2. ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಅಪ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು